# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಮತ್ತು ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಅವರುಗಳು ನಿಯಮ 330 ನೇ ನಿಯಮದ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

## ಸೂಚನೆ

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಯು (ಎಫ್.ಕೆ.ಸಿ.ಸಿ.ಐ) ಆಗಿನ ಮೈಸೂರು ಸಂಸ್ಥಾನದಿಂದ ನಿವೇಶನ ಮಂಜೂರು ಮಾಡಿಸಿಕೊಂಡು, ಈ ನಿವೇಶನದಲ್ಲಿ ಕಟ್ಟಡ ನಿರ್ಮಿಸಲು ಸುಮಾರು 5-6 ವರ್ಷಗಳ ಹಿಂದೆ ಕರ್ನಾಟಕ ಸರ್ಕಾರದಿಂದ ರೂ.10-00 ಕೋಟಿಗಳನ್ನು ಮಂಜೂರು ಮಾಡಿಸಿಕೊಳ್ಳಲಾಗಿದೆ. ಆದರೆ ಸದರಿ ಕಾಮಗಾರಿಯು ಕಳಪೆ ಗುಣಮಟ್ಟದಿಂದ ಕೂಡಿರುವುದಾಗಿ ತಿಳಿದು ಬಂದಿದ್ದು, ಈ ಸಂಬಂಧ ಸೂಕ್ತ ಲೆಕ್ಕ ಹಾಗೂ ದಾಖಲಾತಿಗಳನ್ನು ಸರ್ಕಾರಕ್ಕೆ ನೀಡದೆ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡಿರುವುದಲ್ಲದೆ, ಸದಸ್ಯತ್ವದ ಹಣವನ್ನು ಸದರಿ ಸಂಸ್ಥೆಯು, ನ್ಯಾಯಾಲಯಗಳಲ್ಲಿನ ಹಲವಾರು ವ್ಯಾಜ್ಯಗಳಿಗೆ ನಿಯಮಬಾಹಿರವಾಗಿ ವೆಚ್ಚ ಮಾಡುತ್ತಾ, ಸರ್ಕಾರದ ಎಲ್ಲಾ ಸವಲತ್ತುಗಳನ್ನು ಪಡೆದು, ಖಾಸಗಿ ಸಂಸ್ಥೆಯೆಂದು ಬಿಂಬಿಸಿಕೊಂಡು, ಹಲವು ಅಕ್ರಮಗಳನ್ನು ನಡೆಸಲಾಗುತ್ತಿರುವುದರಿಂದ ಉಂಟಾದ ಗಂಭೀರ ಸಮಸ್ಯೆ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

## ಉತ್ತರ

1) ಬೆಂಗಳೂರಿನ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಯು, 2016 ರಲ್ಲಿ ಶತಮಾನೋತ್ಸವ ಆಚರಿಸಲು ಸರ್. ಎಂ. ವಿಶ್ವೇಶ್ವರಯ್ಯ ರವರ ನೆನಪಿನಲ್ಲಿ ಶತಮಾನೋತ್ಸವ ಭವನವನ್ನು ಒಟ್ಟು ಯೋಜನಾ ವೆಚ್ಚ ರೂ. 19,23,18,068/- ರಲ್ಲಿ ನಿರ್ಮಿಸಲು ತೀರ್ಮಾನಿಸಿ, ಸರ್ಕಾರದಿಂದ ರೂ. 10.00 ಕೋಟಿ ನೀಡಲು ಸರ್ಕಾರವನ್ನು ಕೋರಿರುತ್ತಾರೆ.

2) ಸದರಿಯವರ ಕೋರಿಕೆ ಮೇರೆಗೆ 2016-17ರ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ರವರಿಗೆ ಸರ್. ಎಂ. ವಿಶ್ವೇಶ್ವರಯ್ಯ ರವರ ನೆನಪಿನಲ್ಲಿ ಶತಮಾನೋತ್ಸವ ಭವನ ನಿರ್ಮಿಸಲು ರೂ. 10.00 ಕೋಟಿ ನೀಡುವುದಾಗಿ ಘೋಷಣೆ ಮಾಡಿರುತ್ತಾರೆ.

3) ನಂತರ, ಸರ್ಕಾರವು ಕಟ್ಟಡದ ಯೋಜನಾ ವೆಚ್ಚವನ್ನು ಪರಿಗಣಿಸಿ, ರೂ. 5.00 ಕೋಟಿಗಳನ್ನು ದಿನಾಂಕ 13.06.2016 ರ ಸರ್ಕಾರದ ಆದೇಶದಲ್ಲಿ ಬಿಡುಗಡೆ ಮಾಡಿದೆ. ಎರಡನೇ ಕಂತು ರೂ. 5.00 ಕೋಟಿಗಳನ್ನು ಬಿಡುಗಡೆ ಮಾಡುವ ಮುಂಚೆ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ ರವರಿಂದ ಕಟ್ಟಡದ ಪ್ರಗತಿ ವರದಿ ನೀಡಲು ಕೋರಲಾಗಿ, ದಿನಾಂಕ 19.01.2017 ರಂದು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ ರವರು ಪ್ರಗತಿ ವರದಿಯನ್ನು ನೀಡಿದ್ದು, ದಿನಾಂಕ 19.01.2017 ರವರೆಗೆ ರೂ. 11.18 ಕೋಟಿ ವೆಚ್ಚ ಮಾಡಿರುವುದಾಗಿ ಹಾಗೂ ಇನ್ನುಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಂದಾಜು ರೂ. 8.05 ಕೋಟಿ ಅಗತ್ಯವಿರುತ್ತದೆಂದು ಹಾಗೂ ರೂ. 5.00 ಕೋಟಿಗಳನ್ನು ಬಿಡುಗಡೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ಕಟ್ಟಡದ ಪ್ರಗತಿಯನ್ನು ಆಧರಿಸಿ ಸರ್ಕಾರವು ದಿನಾಂಕ 23.05.2017 ರಂದು ರೂ. 5.00 ಕೋಟಿಗಳನ್ನು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಗೆ ಬಿಡುಗಡೆ ಮಾಡಿದೆ.

4) ಸದರಿ ಸಂಸ್ಥೆಯು ಸರ್ಕಾರ ಬಿಡುಗಡೆ ಮಾಡಿದ ಒಟ್ಟು ರೂ.10.00 ಕೋಟಿಗಳಲ್ಲಿ ರೂ. 9.00 ಕೋಟಿಗಳನ್ನು ಕಟ್ಟಡದ ನಿರ್ಮಾಣಕ್ಕಾಗಿ ಮತ್ತು ರೂ. 1.00 ಕೋಟಿಯನ್ನು ಇತರೆ ಸಂಶೋಧನೆಗಳಿಗಾಗಿ ಉಪಯೋಗಿಸಿ, ಮೊದಲನೇ ಕಂತು ರೂ. 5.00 ಕೋಟಿಗಳಿಗೆ ದಿನಾಂಕ 28.10.2016 ರಂದು ಹಾಗೂ ಎರಡನೇ ಕಂತು ರೂ. 5.00 ಕೋಟಿಗಳಿಗೆ ದಿನಾಂಕ 27.10.2017 ರಂದು ಉಪಯುಕ್ತತಾ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತದೆ.

..2.

5) ಸದರಿ ಕಟ್ಟಡದ ಗುಣಮಟ್ಟ ಹಾಗೂ ಉಪಯೋಗದ ಬಗ್ಗೆ ಸಂಸ್ಥೆಯನ್ನು ಕೇಳಲಾಗಿ, ಸಂಸ್ಥೆಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಕಟ್ಟಡದ ಗುಣಮಟ್ಟವು ಉತ್ತಮವಾಗಿದ್ದು, ಸಂಸ್ಥೆಯು ಇಲ್ಲಿಯವರೆಗೂ ಸಂಸ್ಥೆಯ ಸದಸ್ಯರುಗಳಿಗೆ ಅಂದಾಜು 100 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸರ್ಕಾರವು ಬಿಡುಗಡೆ ಮಾಡಿದ ಮೊತ್ತವನ್ನು ಕಟ್ಟಡಕ್ಕೆ ಹಾಗೂ ಸಂಶೋಧನೆಗೆ ಉಪಯೋಗಿಸಿರುತ್ತದೆ ಎಂದು ತಿಳಿಸಿರುತ್ತಾರೆ.

6) ಮುಂದುವರೆದಂತೆ, ಸದರಿ ಸಂಸ್ಥೆಯು ನ್ಯಾಯಾಲಯಗಳಲ್ಲಿನ ವ್ಯಾಜ್ಯಗಳ ನಿರ್ವಹಣೆ ಮಾಡಲು ಸಂಸ್ಥೆಯ ಸದಸ್ಯತ್ವದ ಹಣ ಹಾಗೂ ಸಂಸ್ಥೆಯ ಇತರೆ ಆದಾಯಗಳಿಂದ ವೆಚ್ಚ ಮಾಡಿರುತ್ತದೆ. ಆದ್ದರಿಂದ ಸರ್ಕಾರದ ಅನುದಾನವನ್ನು ಕಟ್ಟಡದ ನಿರ್ಮಾಣಕ್ಕೆ ಮತ್ತು ಇತರೆ ಸಂಶೋಧನೆಗಾಗಿ ಮಾತ್ರ ಉಪಯೋಗಿಸಿದ್ದು, ಇತರೆ ವೆಚ್ಚಗಳಿಗೆ ಸಂಸ್ಥೆಯ ಆದಾಯದಿಂದ ಭರಿಸಿರುತ್ತದೆ ಎಂದು ಸಹ ಸಂಸ್ಥೆಯು ತಿಳಿಸಿರುತ್ತದೆ.

ಸಂಖ್ಯೆ. ಸಿಐ 38 ಎಸ್‌ಪಿಐ 2023

(ಡಾ. ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು